ಗೆಳತಿಯಿಂದ ದೂರವಾಗುವ ದುಃಖದಿಂದ ಅವರ ಎದೆಭಾರ ಹೆಚ್ಚಾಗಿ ಕಣ್ಣೀರು ಸುರಿಸುತ್ತಲೇ ಅವಳ ಜೊತೆ ಹೆಜ್ಜೆ ಹಾಕುತ್ತಿದ್ದರು. ಎಲ್ಲರೂ ಅವಳನ್ನು ಗಾಡಿ ಹತ್ತಿಸಿ, ಊರಿನ ಹೊಲಮಾರೆಯವರೆಗೂ ಬೀಳ್ಕೊಟ್ಟು ಹಿಂದಿರುಗುತ್ತಿದ್ದರು. ಊರಿನ ವಿವಿಧ ಸಮುದಾಯಗಳ ಮನಸ್ಸನ್ನು ಬೆಸೆಯುವಲ್ಲಿ ಮದುವೆ ಕಾರ್ಯಗಳೂ ಮುಖ್ಯವಾಗಿದ್ದ ದಿನಗಳವು. ಇಂತಹ ಸಹಜೀವನದ ಸಾಂಗತ್ಯದಿಂದ ಊರು ತನ್ನ ಸೌಹಾರ್ದತೆಯ ಸೌಂದರ್ಯವನ್ನು ವರ್ಧಿಸಿಕೊಳ್ಳುತ್ತಿತ್ತು.

ಸಾಮರಸ್ಯ ಬದುಕಿನ ಸಂತೋಷವನ್ನು ಹೇಳುವ ಇನ್ನೊಂದು ಆಚರಣೆ 'ಹೊರಬೀಡು'. ವರ್ಷಕ್ಕೊಮ್ಮೆಯೋ ಅಥವಾ ಎರಡು ವರ್ಷಕ್ಕೊಮ್ಮೆಯೋ, ನಮ್ಮೂರಿನಲ್ಲಿ 'ಹೊರಬೀಡು' ಆಚರಿಸುತ್ತಿದ್ದರು. ಇದೊಂದು ಹಬ್ಬದ ರೂಪದಲ್ಲಿದ್ದ ಸಾಮೂಹಿಕ ಆಚರಣೆ. ಊರಿನ ಒಳಿತಿಗಾಗಿ, ಜನರಿಗೆ ಮತ್ತು ದನ–ಕರು, ಕುರಿ–ಮೇಕೆಗಳಿಗೆ ರೋಗ–ರುಜಿನ ಬಾರದಂತೆ ತಡೆಯಲು ಈ ಆಚರಣೆ ಮಾಡುತ್ತಿದ್ದರು. ಊರಿನ ಹಿತಕ್ಕಾಗಿ ಎಲ್ಲ ಸಮುದಾಯದವರೂ ಹಲವಾರು ದೇಹ, ಒಂದೇ ಮನಸ್ಸಿನಂತೆ ಬೆಸೆದುಕೊಂಡು 'ಹೊರಬೀಡು'ಗೆ ಹೋಗುತ್ತಿದ್ದರು. ಮುಂಗಾರು ಪ್ರಾರಂಭವಾದಮೇಲೆ ಹೊಲದಲ್ಲಿ ಉಳುಮೆ, ಬಿತ್ತನೆ, ಪೈರು ನಾಟಿ ಮಾಡಿದ ನಂತರ ಬೇಸಾಯದ ಮೊದಲ ಹಂತದ ಕಾರ್ಯಗಳು ಮುಗಿಯುತ್ತಿದ್ದವು. ಬೇಸಗೆ ನಿಧಾನವಾಗಿ ಕಾವು

